ಪ್ರಾರ್ಥನೆ

# ‘ಆನಂದಲಹರಿ’ ಯಿಂದ



ವಿಧಾತ್ರೀ ಧರ್ಮಾಣಾಂ ತ್ವಮಸಿ ಸಕಲಾಮ್ನಾಯಜನನೀ ।
ತ್ವಮರ್ಥಾನಾಂ ಮೂಲಂ ಧನದನಮನೀಯಾಂಘ್ರಿಕಮಲೇ ॥
ತ್ವಮಾದಿಃ ಕಾಮಾನಂ ಜನನಿ ಕೃತಕಂದರ್ಪವಿಜಯೇ ।
ಸತಾಂ ಮುಕ್ತೇರ್ಬೀಜಂ ತ್ವಮಸಿ ಪರಮಬ್ರಹ್ಮಮಹಿಷೀ ॥ ೧ ॥

ದೇವಿ, ಸರ್ವಕಾಲದಲ್ಲಿಯೂ ಧರ್ಮಕ್ಕೆ ನೀನೇ ತಾಯಿಯು. ನಿನ್ನನ್ನು ಅರ್ಚಿಸುವುದು ಎಲ್ಲ ಕಾಮನೆಗಳಿಗೂ ಮೂಲವು. ಇಷ್ಟಾರ್ಥಗಳ ತಾಯಿ, ಮನ್ಮಥನ ವಿಜಯದಲ್ಲಿ ನೀನೇ ಆದಿ. ಪರಬ್ರಹ್ಮ ಮಹಿಷಿ ನೀನೇ; ನೀನು ಮುಕ್ತಿಗೆ ಬೀಜವಾಗಿರುವೆ.

ಪ್ರಭೂತಾ ಭಕ್ತಿಸ್ತೇ ಯದಪಿ ನ ಮಮಾಲೋಲ ಮನಸಃ ।
ತ್ವಯಾತು ಶ್ರೀಮತ್ಯಾ ಸದಯಮವಲೋಕ್ಯೋಽಹಮಧುನಾ ॥
ಪಯೋದಃ ಪಾನೀಯಂ ದಿಶತಿ ಮಧುರಂ ಚಾತಕಮುಖೇ ।
ಭೃಶಂ ಶಂಕೇ ಕೈರ್ವಾ ವಿಧಿಭಿರನುನೀತಾ ಮಮ ಮತಿಃ ॥ ೨ ॥

ನನ್ನ ಚಾಂಚಲ್ಯ ಚಿತ್ತವು ನಿನ್ನ ಭಕ್ತಿಯಲ್ಲಿ ನೆಲೆಸದಿದ್ದರೂ ಶ್ರೀಮತಿಯಾದ ನೀನು ನನ್ನನ್ನು ಕರುಣೆಯಿಂದ ನೋಡಿ ಕಾಪಾಡು. ಚಾತಕ ಪಕ್ಷಿಯು ಕ್ಷೀರ ಮತ್ತು ಜಲವನ್ನು ಬೇರ್ಪಡಿಸುವಂತೆ ನೀನು ನನ್ನ ಅನುಮಾನವನ್ನು ಹೋಗಲಾಡಿಸಿ, ಸದ್ಬುದ್ಧಿಯನ್ನು ನೀಡಿ ಕಾಪಾಡು.

ಕೃಪಾಪಾಂಗಾ ಲೋಕಂ ವಿತರ ತರಸಾ ಸಾಧುಚರಿತೇ ।
ನ ತೇ ಯುಕ್ತೋಪೇಕ್ಷಾ ಮಯಿ ಶರಣ ದೀಕ್ಷಾಮುಪಗತೇ ॥
ನ ಚೇದಿಷ್ಟಂ ದದ್ಯಾದನುಪದಮಹೋ ಕಲ್ಪಲತಿಕಾ ।
ವಿಶೇಷಃ ಸಾಮಾನ್ಯೈಃ ಕಥಮಿತರವಲ್ಲೀ ಪರಿಕರೈಃ ॥ ೩ ॥

ಸಾಧು ಚರಿತ್ರೆಗಳ ಕೃಪೆಯಿಂದ ಕೂಡಿರುವ ಈ ಲೋಕದಲ್ಲಿ ನನಗೆ ಶರಣ ದೀಕ್ಷೆಯನ್ನು ಅನುಗ್ರಹಿಸಿ, ನಾನು ಸರ್ವೇಸಾಮಾನ್ಯನಾದರೂ ನನ್ನ ಇಷ್ಟಾರ್ಥಗಳನ್ನು ನೀನು ಪೂರೈಸು.

ಅಯಃ ಸ್ಪರ್ಶೇ ಲಗ್ನಂ ಸಪದಿ ಲಭತೇ ಹೇಮಪದವೀಂ ।
ಯಥಾ ರಥ್ಯಾಪಾಥಃ ಶುಚಿ ಭವತಿ ಗಂಗೌಘಮಿಲಿತಮ್ ॥
ತಥಾ ತತ್ತತ್ಪಾಪೈರತಿ ಮಲಿನಮಂತರ್ಮಮ ಯದಿ ।
ತ್ವಯಿ ಪ್ರೇಮ್ಣಾಸಕ್ತಂ ಕಥಮಿವ ನ ಜಾಯೇತ ವಿಮಲಮ್ ॥ ೪ ॥

ಗಂಗೆಯಲ್ಲಿ ಮಿಂದರೆ ಹೇಗೆ ಪಾಪಿಗಳು ಶುದ್ಧರಾಗುವರೋ, ಅಂತೆಯೇ ನಿನ್ನ ಸ್ಪರ್ಶವಾದರೆ ಸುವರ್ಣ ಪದವಿಯನ್ನು ಹೊಂದುತ್ತಾರೆ. ಅಂತೆಯೇ ತಾಪದಿಂದ ಹೃದಯದಲ್ಲಿ ಅತಿಮಲಿನನಾದ ನಾನು ನಿನ್ನಲ್ಲಿ ಶುದ್ಧ ಪ್ರೇಮವಿಡದಿದ್ದಲ್ಲಿ ಹೇಗೆ ಶುದ್ಧನಾಗುತ್ತೇನೆ?

— ಶ್ರೀಶಂಕರಾಚಾರ್ಯ

ಸೂಕ್ತಿಪ್ರಭ

## ಕನ್ನಡ ಸೂಕ್ತಿಗಳು

**ಅ**ತ್ಯಂತ ಸುಳ್ಳು ಹೇಳುವವನೇ ಹೊಲೆಯ, ಸುಳ್ಳು ಹೇಳದೆ ಇರುವ ಹೊಲೆಯನು ಅತಿ ಶ್ರೇಷ್ಠನಾದ ಸಂನ್ಯಾಸಿ. ಸುಳ್ಳು ಹೇಳುತ್ತಾ ಮಾಡುವ ನೂರು ಯಜ್ಞಗಳು ಪಂಚ ಮಹಾಪಾತಕ.

— ರಾಘವಾಂಕ

**ನ**ಮ್ಮನ್ನೆಲ್ಲ ಹೆತ್ತು, ಸಾಕಿ, ಸಲಹಿದ ತಾಯಿ ಹೆಣ್ಣಲ್ಲವೆ? ಹೆಣ್ಣು ಹೆಣ್ಣು ಎಂದು ಏಕೆ ದೂಷಿಸುವರು ಜನರು? ಅವರು ಕಣ್ಣು ಕಾಣದ ಕುರುಡರೇ ಸರಿ. — ಸಂಚಿಯ ಹೊನ್ನಮ್ಮ

**ಲೋ**ಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆ ಮನೆಯವರ ದುಃಖಕ್ಕೆ ಅಳುವರ ಮೆಚ್ಚ ಕೂಡಲ ಸಂಗಮದೇವ.

— ಬಸವಣ್ಣ

**ಬೆ**ಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗೆ ಅಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

— ಅಕ್ಕ ಮಹಾದೇವಿ

**ತ**ನುವ ನೀರೊಳಗದ್ದಿ ಫಲವೇನು, ತನ್ನ
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜನು?

— ಪುರಂದರದಾಸರು